**KOTA SRINIVASA POOJARY**
**MEMBER OF PARLIMENT**
**(LOK SABHA)**
**Udupi - Chikmagaluru, Karnataka**

**Permanent Address:**
Rajathadri, Deputy Commissioner Building,
C-Block, Manipal, Udupi, Karnataka
Phone : 0820-2574950
Mobile : +91-9448327964
E-mail : srinivasa.poojary@sansad.nic.in
shrinivaspoojari53@gmail.com

ನಂ: ಎಮ್.ಪಿ.ಉ–ಚಿ/ 1849 / 2024–25

ದಿನಾಂಕ: 17.03.2025

ರಿಗೆ,

ಶ್ರೀಯುತ ಸಿದ್ಧರಾಮಯ್ಯನವರು
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ
ಬೆಂಗಳೂರು.

ಸನ್ಮಾನ್ಯರೇ,

ದೇಶದ ಎಲ್ಲಾ ರೈಲು ಹಳಿಗಳೂ ಭಾರತ ಸರಕಾರದ ಬಜೆಟ್ ಅನುದಾನ ಪಡೆದರೆ, ಮಂಗಳೂರು, ಮುಂಬಯಿ ಕೊಂಕಣ ಮಾರ್ಗ ಮಾತ್ರ ಪ್ರತ್ಯೇಕ ನಿಗಮದ ಕೈಯಲ್ಲಿ ಇದ್ದು ಈ ನಿಗಮಕ್ಕೆ ಕರ್ನಾಟಕ ಸರಕಾರ 15% ಅಂದರೆ ಸುಮಾರು 200 ಕೋಟಿಯ ಹೂಡಿಕೆಯನ್ನು 30 ವರ್ಷಗಳ ಹಿಂದೆ ಮಾಡಿರುತ್ತದೆ. ಈ ಹೂಡಿಕೆಗೆ ರಾಜ್ಯದ ಕರಾವಳಿಯನ್ನು ಮುಂಬಯಿಗೆ ಜೋಡಿಸಿ 30 ವರ್ಷಗಳ ಕಾಲ ರೈಲು ಓಡಾಡಿದ ಲಾಭ ರಾಜ್ಯಕ್ಕೆ ಈಗಾಗಲೇ ಸಿಕ್ಕಿರುತ್ತದೆ. ಮೂಲ ಒಪ್ಪಂದದಂತೆ, ಆರಂಭವಾದ ಹತ್ತು ವರ್ಷಗಳಲ್ಲಿ ಈ ನಿಗಮವು ಭಾರತೀಯ ರೈಲ್ವೆ ಜತೆ ವಿಲೀನವಾಗಿ ಅದರ ಖರ್ಚು ಹಳಿ ಡಬ್ಲಿಂಗ್ ಎಲ್ಲವನ್ನೂ ನೋಡಿಕೊಳ್ಳಬೇಕಾಗಿತ್ತು.

ಆದರೆ, ಇಂದಿಗೂ ಈ ವಿಲೀನ ಮಾಡದೇ ಕೊಂಕಣ ರೈಲ್ವೆ ನಿಗಮವಾಗಿ ರಾಜ್ಯದ ಪಾಲುದಾರಿಕೆಯಲ್ಲಿ ಅದೂ ಬಹುಕಾಲ ನಷ್ಟದಲ್ಲೇ ಮುಂದುವರಿದ ಪರಿಣಾಮ, ಇಂದು ರೈಲು ದಟ್ಟಣೆಯ ಹೊರತಾಗಿಯೂ ನಿಲ್ದಾಣಗಳು ಹಿಂದುಳಿದಿರುವುದು ಮಾತ್ರವಲ್ಲ, 175% ದಟ್ಟಣೆಯ ಹೊರತಾಗಿಯೂ ಹಳಿಗಳೂ ಸಿಂಗಲ್ ಲೈನ್ ಆಗಿಯೇ ಇದ್ದು, ಇದೀಗ ಸಾರ್ವಜನಿಕರಿಂದ ಡಬ್ಲಿಂಗ್ ಮತ್ತಿತರ ಅಭಿವೃದ್ಧಿಗೆ ತೀವ್ರ ಬೇಡಿಕೆ ಬರುತ್ತಿವೆ.

ಈ ಹಿನ್ನೆಲೆಯಲ್ಲಿ ಗೋವಾ ಸರಕಾರದಂತೆ, ಕರ್ನಾಟಕವೂ ಕೂಡ ತನ್ನ ಶೇರನ್ನು ಭಾರತೀಯ ರೈಲ್ವೆಗೆ ಹಸ್ತಾಂತರ ಮಾಡಿ ಹೊರ ಬರುವುದರಲ್ಲಿ ಜನರ ಮತ್ತು ರಾಜ್ಯದ ಆರ್ಥಿಕ ಲಾಭವಿದ್ದು, ಆ ಮೂಲಕ ಕೊಂಕಣ ಮಾರ್ಗವು ಭಾರತೀಯ ರೈಲ್ವೆಯಲ್ಲಿ ವಿಲೀನವಾಗಿ ಭಾರತ ಸರಕಾರದ ಬಜೆಟ್ ಅನುದಾನ ಪಡೆದು ದೇಶದ ಉಳಿದ ಭಾಗದಂತೆ ಅಭಿವೃದ್ಧಿ ಆಗಲಿದೆ. ಹೀಗಾಗಿ ಈ ಬಗ್ಗೆ ತಾವು ರಾಜ್ಯದ ನಿಲುವನ್ನು ಮಾನ್ಯ ರೈಲ್ವೇ ಸಚಿವರಿಗೆ ಅಧಿಕೃತ ಪತ್ರದ ಮೂಲಕ ತಿಳಿಸುವಂತೆ ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**ಕೋಟ ಶ್ರೀನಿವಾಸ ಪೂಜಾರಿ**